## ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಡಿ. ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 596

ಉತ್ತರಿಸುವ ಸಚಿವರು : ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

ಉತ್ತರಿಸಬೇಕಾದ ದಿನಾಂಕ : 11–03–2025

*****

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹೊಸ ಜವಳಿ ನೀತಿಗೆ ಬೆಂಬಲ ಬೆಲೆ ನೀಡಲು ಸರ್ಕಾರದ ಕಾರ್ಯ ಸೂಚಿಯಲ್ಲಿದೆಯೇ; | 2024–25ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ–328 ರಲ್ಲಿ ರಾಜ್ಯದಲ್ಲಿ ಜವಳಿ ಹಾಗೂ ನೇಕಾರಿಕೆ ಅಭಿವೃದ್ಧಿ, ಬಂಡವಾಳ ಹೂಡಿಕೆ ಹಾಗೂ ಉದ್ಯೋಗ ಸೃಜಿಸಲು 2024–25ರ ಅವಧಿಗೆ ರೂ.10,000 ಕೋಟಿಗಳ ಬಂಡವಾಳ ಹೂಡಿಕೆ ಹಾಗೂ 2 ಲಕ್ಷ ಉದ್ಯೋಗಗಳ ಸೃಜನೆಯ ಗುರಿಯೊಂದಿಗೆ ಹೊಸ ಜವಳಿ ನೀತಿಯನ್ನು ಜಾರಿಗೊಳಿಸಲಾಗುವುದು ಎಂದು ಘೋಷಣೆಯಾಗಿರುತ್ತದೆ.<br><br>2025–26ನೇ ಸಾಲಿನ ಆಯವ್ಯಯದ ಕಂಡಿಕೆ–352 ರಲ್ಲಿ ರಾಜ್ಯದಲ್ಲಿ ಜವಳಿ ಹಾಗೂ ಸಿದ್ಧ ಉಡುಪು ಕ್ಷೇತ್ರದಲ್ಲಿ ಹೆಚ್ಚಿನ ಬಂಡವಾಳ ಆಕರ್ಷಿಸಿ ಸುಮಾರು ಎರಡು ಲಕ್ಷ ಉದ್ಯೋಗ ಸೃಜಿಸುವ ಉದ್ದೇಶದಿಂದ ನೂತನ 'ಜವಳಿ ನೀತಿ 2025–30' ನ್ನು ರೂಪಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. |
| ಆ) | ರಾಜ್ಯದಲ್ಲಿ ಕೈಮಗ್ಗಗಳ ಪುನರ್ ಜೀವನಕ್ಕೆ ಕೈಗೊಂಡ ಕ್ರಮಗಳೇನು; | ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ರಾಜ್ಯದ ನೇಕಾರರಿಗೆ ಒದಗಿಸಲಾಗುತ್ತಿರುವ ಯೋಜನೆಗಳ ಸೌಲಭ್ಯಗಳು ಈ ಕೆಳಕಂಡಂತಿದೆ.<br>• ನೇಕಾರರ ಸಮ್ಮಾನ್ ಯೋಜನೆಯಡಿ, ಕೈಮಗ್ಗ ಹಾಗೂ ವಿದ್ಯುತ್ ಮಗ್ಗ ನೇಕಾರರಿಗೆ ಈ ಯೋಜನೆಯಡಿ ವಾರ್ಷಿಕ ರೂ.5,000/– ಗಳನ್ನು ನೇರವಾಗಿ ಡಿ.ಬಿ.ಟಿ ಮುಖಾಂತರ ಪಾವತಿಸಲಾಗುವುದು.<br>• ನೇಕಾರರ ಮಕ್ಕಳಿಗೆ ವಿದ್ಯಾರ್ಥಿ ವೇತನ.<br>• ಕೈಮಗ್ಗ ವಿಕಾಸ ಯೋಜನೆ – ಕೈಮಗ್ಗ ಮತ್ತು ಅಗತ್ಯ ಸಲಕರಣೆಗಳನ್ನು ಖರೀದಿಸಲು ಘಟಕ ವೆಚ್ಚದ ಶೇ.50 ರಷ್ಟು ಸಹಾಯಧನ ಒದಗಿಸಲಾಗುವುದು.<br>• ಕಚ್ಚಾ ಮಾಲು ಖರೀದಿ ಮೇಲೆ ಕೈಮಗ್ಗ ಸಹಾಕರ ಸಂಘಗಳಿಗೆ ಪ್ರತಿ ಕೆ.ಜಿ ಗೆ ರೂ.15/– ಸಹಾಯಧನ ನೀಡುವುದು.<br>• ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ಸಹಕಾರ ಸಂಘ / ಸಹಕಾರ ಬ್ಯಾಂಕ್‌ಗಳಿಂದ ಪಡೆಯುವ ಸಾಲಕ್ಕೆ ಶೂನ್ಯ ಹಾಗೂ ಶೇ.1 ರ ಬಡ್ಡಿ ದರದಲ್ಲಿ ರೂ.2.00 ಲಕ್ಷಗಳವರೆಗೆ, ಶೇ.3 ರ ಬಡ್ಡಿದರದಲ್ಲಿ ರೂ.2.00 ಲಕ್ಷಗಳಿಂದ ರೂ.5.00 ಲಕ್ಷಗಳವರೆಗೆ ಸಾಲ ನೀಡಲಾಗುವುದು. |

…2

| | | |
|---|---|---|
| | | • ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ಸಹಕಾರ ಸಂಘ / ಸಹಕಾರ ಬ್ಯಾಂಕ್ / ವಾಣಿಜ್ಯ ಬ್ಯಾಂಕ್‌ಗಳಿಂದ ಪಡೆಯುವ ಸಾಲಕ್ಕೆ ಶೇ.8ರಷ್ಟು ಬಡ್ಡಿ ಸಹಾಯಧನ ನೀಡಲಾಗುವುದು.<br>• ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ವರ್ಷ ಪೂರ್ತಿ ಶೇ.20 ರಿಬೇಟ್ ಯೋಜನೆ.<br>• ಮಿತವ್ಯಯ ನಿಧಿ ಯೋಜನೆ–ಏಳಿಗೆ ನಿಧಿ ಯೋಜನೆಯಡಿ ಸರ್ಕಾರದ ಸಮಚಂದಾ ಹಾಗೂ ಏಳಿಗೆ ನಿಧಿ ಮೇಲಿನ ಬಡ್ಡಿ ಸಹಾಯಧನ ಒದಗಿಸಲಾಗುವುದು.<br>• ಉಣ್ಣೆ ವಲಯ ಪುನಃಶ್ಚೇತನ ಮತ್ತು ಬಲವರ್ಧನೆ ಯೋಜನೆಯಡಿ ಸಹಾಯಧನ |
| ಇ) | ರಾಜ್ಯದಲ್ಲಿ ಹೊಸ ಜವಳಿ ಪಾರ್ಕ್‌ಗಳ ನಿರ್ಮಾಣಕ್ಕೆ ಸರ್ಕಾರ ಯೋಚಿಸಿದೆಯೇ; | ಪಿಪಿಪಿ ಮಾದರಿಯಲ್ಲಿ ಜವಳಿ ಪಾರ್ಕ್ ಸ್ಥಾಪಿಸಲು ಕಳೆದ ನಾಲ್ಕು ಸಾಲುಗಳ ಆಯವ್ಯಯ ಭಾಷಣಗಳಲ್ಲಿ ಘೋಷಣೆಯಾಗಿರುತ್ತದೆ. ಅದರಂತೆ ಪಾರ್ಕ್‌ಗಳನ್ನು ಸ್ಥಾಪಿಸಲು ಕ್ರಮವಹಿಸಲಾಗುತ್ತಿದೆ (ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ). |
| ಈ) | ನೇಕಾರ ಅಭಿವೃದ್ಧಿ ನಿಗಮದಿಂದ ಇದುವರೆಗೂ ಎಷ್ಟು ಮಂದಿ ಫಲಾನುಭವಿಗಳಿದ್ದಾರೆ? (ಫಲಾನುಭವಿಗಳ ವಿವರ ನೀಡುವುದು) | ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿ 3567 ನೇಕಾರರು ಕಾರ್ಯನಿರ್ವಹಿಸುತ್ತಿದ್ದಾರೆ. ಸದರಿ ನೇಕಾರ ಫಲಾನುಭವಿಗಳ ವಿವರವನ್ನು ಅನುಬಂಧ–2 ರಲ್ಲಿ ಒದಗಿಸಲಾಗಿದೆ. |

ಸಂಖ್ಯೆ: **CI 35 JAKE 2025**

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

# ಅನುಬಂಧ - 01

## ಸಾರ್ವಜನಿಕ ಖಾಸಗಿ ಸಹಭಾಗಿತ್ವ ಜವಳಿ ಪಾರ್ಕ್‌ಗಳ ವಿವರ

| ಕ್ರ.ಸಂ. | ಪಾರ್ಕ್ ಹೆಸರು | ಆಯವ್ಯಯ ಘೋಷಣೆ ಕಂಡಿಕೆ | ಪಾರ್ಕ್ ವಿವರ |
|---|---|---|---|
| 1. | ಕಾರ್ಕಳ ಜವಳಿ ಪಾರ್ಕ್ | 2020-21 ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ 167 | ಕಾರ್ಕಳ ತಾಲೂಕಿನ ನಿಟ್ಟೆ ಗ್ರಾಮದ ಸ.ನಂ 361/1 ರಲ್ಲಿನ ಒಟ್ಟು 15 ಎಕರೆ ಪ್ರದೇಶವನ್ನು ಕೈಮಗ್ಗ ಮತ್ತು ಜವಳಿ ಇಲಾಖೆಗೆ ಹಸ್ತಾಂತರಿಸಲಾಗಿದ್ದು, ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಜವಳಿ ಪಾರ್ಕ್ ಸ್ಥಾಪಿಸಲು ಸಚಿವ ಸಂಪುಟದ ಅನುಮೋದನೆಯಾಗಿರುತ್ತದೆ.<br><br>Master Developer ಅನ್ನು ಆಯ್ಕೆ ಮಾಡಲು ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. ಆಯ್ಕೆಯಾಗುವ Master Developer ಕಾಮಗಾರಿಗಳನ್ನು ಯೋಜನೆಯನ್ವಯ ಅನುಷ್ಠಾನಗೊಳಿಸುತ್ತಾರೆ. |
| 2. | ರಾಣೆಬೆನ್ನೂರು ಜವಳಿ ಪಾರ್ಕ್ | 2022-23 ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ 273 | ರಾಣೆಬೆನ್ನೂರು ತಾಲ್ಲೂಕಿನ ಬಡಬಸಾಪುರ ಗ್ರಾಮದ ಸ.ನಂ. 20 ರಲ್ಲಿನ 16 ಎಕರೆ 8 ಗುಂಟೆ ಜಮೀನು ಕೈಮಗ್ಗ ಮತ್ತು ಜವಳಿ ಇಲಾಖೆಗೆ ಹಸ್ತಾಂತರಿಸಲಾಗಿದ್ದು, ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಸ್ಥಾಪಿಸಲು ಕ್ರಮವಹಿಸಲಾಗುತ್ತಿದೆ.<br><br>ಸಚಿವ ಸಂಪುಟದ ಅನುಮೋದನೆಯ ನಂತರ, Master Developer ಅನ್ನು ಆಯ್ಕೆ ಮಾಡಲು ಟೆಂಡರ್ ಪ್ರಕ್ರಿಯೆ ಕೈಗೊಂಡು, ಆಯ್ಕೆಯಾಗುವ Master Developer ಮೂಲಕ ಕಾಮಗಾರಿಗಳನ್ನು ಯೋಜನೆಯನ್ವಯ ಅನುಷ್ಠಾನಗೊಳಿಸಲಾಗುವುದು. |
| 3. | ರಾಯಚೂರು ಜವಳಿ ಪಾರ್ಕ್ | 2024-25 ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ 330 | ರಾಯಚೂರಿನಲ್ಲಿ ಗೈರಾಣ ಗ್ರಾಮದ ಸ.ನಂ.928/*/* ರಲ್ಲಿ 15 ಎಕರೆ ಜಮೀನು ಕೈಮಗ್ಗ ಮತ್ತು ಜವಳಿ ಇಲಾಖೆಗೆ ಹಸ್ತಾಂತರಿಸಲಾಗಿದ್ದು, ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಸ್ಥಾಪಿಸಲು ಕ್ರಮವಹಿಸಲಾಗುತ್ತಿದೆ.<br><br>ಸಚಿವ ಸಂಪುಟದ ಅನುಮೋದನೆಯ ನಂತರ, Master Developer ಅನ್ನು ಆಯ್ಕೆ ಮಾಡಲು ಟೆಂಡರ್ ಪ್ರಕ್ರಿಯೆ ಕೈಗೊಂಡು, ಆಯ್ಕೆಯಾಗುವ Master Developer ಮೂಲಕ ಕಾಮಗಾರಿಗಳನ್ನು ಯೋಜನೆಯನ್ವಯ ಅನುಷ್ಠಾನಗೊಳಿಸಲಾಗುವುದು. |

....2

| ಕ್ರ.ಸಂ. | ಪಾರ್ಕ್ ಹೆಸರು | ಆಯವ್ಯಯ ಘೋಷಣೆ ಕಂಡಿಕೆ | ಪಾರ್ಕ್ ವಿವರ |
|---|---|---|---|
| 4. | ನವಲಗುಂದ ಜವಳಿ ಪಾರ್ಕ್ | 2022-23 ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ 273 | ನವಲಗುಂದ ಗ್ರಾಮದಲ್ಲಿ 15 ಎಕರೆ ವಿಸ್ತೀರ್ಣದ ಕೃಷಿ ಕಮಾಂಡ್ ಪ್ರದೇಶದಲ್ಲಿ (ಅಚ್ಚುಕಟ್ಟು ಪ್ರದೇಶ) ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಜವಳಿ ಪಾರ್ಕ್ ಸ್ಥಾಪಿಸಲು, ಕಮಾಂಡ್ ಏರಿಯಾ ಅಥಾರಿಟಿ, ಮಲಪ್ರಭ ಮತ್ತು ಘಟಪ್ರಭಾ ಯೋಜನೆಗಳ ಅಡಿಯಲ್ಲಿ, ಬೆಳಗಾವಿ ಪ್ರಾಧಿಕಾರವು ಜವಳಿ ಇಲಾಖೆಗೆ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ.<br><br>ಸರ್ಕಾರದ ಆದೇಶ ದಿನಾಂಕ:28.02.2023 ರಲ್ಲಿ ವಿಧಿಸಿರುವ ಷರತ್ತುಗಳನ್ನು ಸಡಲೀಕರಣಗೊಳಿಸಿ, ಪರಿಷ್ಕೃತ ಆದೇಶ ಹೊರಡಿಸುವಂತೆ ಕೋರಿ ಜಲ ಸಂಪನ್ಮೂಲ ಇಲಾಖೆ (ಕಾಡಾ) ಹಾಗೂ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ.<br><br>ಜಲ ಸಂಪನ್ಮೂಲ ಇಲಾಖೆ (ಕಾಡಾ) ಇವರು ಪರಿಷ್ಕೃತ ಆದೇಶ ಹೊರಡಿಸಲು ಪ್ರಸ್ತಾವನೆಯು ಬಾಕಿ ಇದ್ದು, ಪರಿಷ್ಕೃತ ಆದೇಶದ ನಂತರ ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಪಾರ್ಕ್ ಸ್ಥಾಪಿಸಲು ಕ್ರಮವಹಿಸಲಾಗುವುದು. |

K-Jyothi 6/3/2025

**ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ**
**ನಿರ್ದೇಶಕರು ಕೈಮಗ್ಗ ಮತ್ತು ಜವಳಿ,**
**ಬೆಂಗಳೂರು**

....3

| ಕ್ರ. ಸಂ. | ಪಾರ್ಕ್ ಹೆಸರು | ಆಯವ್ಯಯ ಘೋಷಣೆ ಕಂಡಿಕೆ | ಪಾರ್ಕ್ ವಿವರ | ಪ್ರಗತಿ ವಿವರ |
|---|---|---|---|---|
| 5. | PM-MITRA ಮೆಗಾ ಜವಳಿ ಪಾರ್ಕ್ | 2022-23 ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ 272 | ಕಲಬುರ್ಗಿ ಜಿಲ್ಲೆ, ನದಿಸಿನ್ನೂರ, ಫಿರೋಜಾಬಾದ್ ಮತ್ತು ಕಿರಣಗಿ ಗ್ರಾಮದಲ್ಲಿ ಪಿಎಂ-ಮಿತ್ರ ಮೆಗಾ ಜವಳಿ ಪಾರ್ಕ್ ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಜವಳಿ ಇಲಾಖೆಯ ಸ್ವಾಧೀನದಲ್ಲಿರುವ ಒಟ್ಟು 1000 ಎಕರೆ ಜಮೀನನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಪಾರ್ಕ್ ಸ್ಥಾಪಿಸಲು ಕ್ರಮವಹಿಸಲಾಗುತ್ತಿದೆ. | ದಿನಾಂಕ:17.09.2024 ರಂದು ಜರುಗಿದ ಸಚಿವ ಸಂಪುಟ ಸಭೆಯಲ್ಲಿ PM-MITRA Park ಗೇಟ್‌ವರೆಗೆ ಮೂಲಭೂತ ಸೌಕರ್ಯ ಒದಗಿಸಲು ಅನುದಾನ ನೀಡಲು ಅನುಮೋದನೆಯಾಗಿರುತ್ತದೆ.<br><br>ಜವಳಿ ಪಾರ್ಕ್ ಕುರಿತಂತೆ ರಸ್ತೆ, ನೀರು ಹಾಗೂ ವಿದ್ಯುತ್ ಸಂಪರ್ಕವನ್ನು ಪಾರ್ಕ್ ಗೇಟ್‌ವರೆಗೆ ಒಟ್ಟು ಮೊತ್ತ ರೂ.390.2681 ಕೋಟಿಗಳಿಗೆ ದಿನಾಂಕ:03.10.2024 ರಂದು ಸರ್ಕಾರ ಆದೇಶ ಹೊರಡಿಸಿರುತ್ತಾರೆ.<br><br>ಜೋಡಿ ರಸ್ತೆ ನಿರ್ಮಾಣ, ಎರಡೂ ಬದಿ ಕಾಂಕ್ರೀಟ್ ಚರಂಡಿ ನಿರ್ಮಾಣ ಹಾಗೂ 3.63 MLD ನೀರು ಹರಿಸಲು ಜೇವರ್ಗಿ ತಾಲ್ಲೂಕಿನ ಮದ್ರಿ ಬಳಿ ಅಣೆಕಟ್ಟನ್ನು ನಿರ್ಮಾಣಕ್ಕೆ ಟೆಂಡರ್ ಅನ್ನು ಆಹ್ವಾನಿಸಲಾಗಿರುತ್ತದೆ.<br><br>ಜವಳಿ ಪಾರ್ಕ್‌ಗೆ ಕೈಗಾರಿಕಾ ಉದ್ದೇಶಕ್ಕಾಗಿ 12.09 MLD ನೀರನ್ನು ನಂದಿಕೂರು ಗ್ರಾಮದ Sewage Treatment Plan(STP) ಯಿಂದ ನೀರು ಸರಬರಾಜು ಮಾಡಲು ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ, ಕಲಬುರಗಿ ವಿಭಾಗ ರವರು ಈಗಾಗಲೇ ಸರ್ವೆಯನ್ನು ಪೂರ್ಣಗೊಳಿಸಿದ್ದು, ಪೈಪ್‌ಲೈನ್ ಡಿಸೈನ್ ಕಾರ್ಯ ಪ್ರಕ್ರಿಯೆಯಲ್ಲಿರುತ್ತದೆ.<br><br>ಜವಳಿ ಪಾರ್ಕ್‌ಗೆ 180 MW ವಿದ್ಯುತ್ ಸರಬರಾಜು ಮಾಡಲು ಪವರ್ ಸ್ಟೇಷನ್ ನಿರ್ಮಾಣಕ್ಕಾಗಿ ಸರ್ವೆ ನಡೆಸಲು ಕ್ರಮ ವಹಿಸಲಾಗುತ್ತಿದೆ.<br><br>ಮುಂದುವರೆದು, Master Developer ಆಯ್ಕೆಗಾಗಿ ಸಿದ್ಧಪಡಿಸಿರುವ ಟೆಂಡರ್ ಡಾಕ್ಯುಮೆಂಟ್‌ಗಳು PPPAC ಸಮಿತಿ ಸಭೆಯ ಪರಿಶೀಲನಾ ಹಂತದಲ್ಲಿರುತ್ತದೆ. ಅನುಮೋದನೆ ನಂತರ Master Developer ಅನ್ನು ಆಯ್ಕೆ ಮಾಡಲು ಟೆಂಡರ್ ಪ್ರಕ್ರಿಯೆ ಕೈಗೊಂಡು, ಆಯ್ಕೆಯಾಗುವ Master Developer ಮೂಲಕ ಕಾಮಗಾರಿಗಳನ್ನು ಯೋಜನೆಯನ್ವಯ ಅನುಷ್ಠಾನಗೊಳಿಸಲಾಗುವುದು. |

| ಕ್ರ.ಸಂ. | ಪಾರ್ಕ್ ಹೆಸರು | ಆಯವ್ಯಯ ಘೋಷಣೆ ಕಂಡಿಕೆ | ಪಾರ್ಕ್ ವಿವರ | ಪ್ರಗತಿ ವಿವರ |
|---|---|---|---|---|
| 1. | ಮೈಸೂರು ವಿಭಾಗ | 2024-25ನೇ ಸಾಲಿನ ಆಯವ್ಯಯದ ಘೋಷಣೆ ಕಂಡಿಕೆ-330 | ಮೈಸೂರು ವಿಭಾಗದ ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಚೀಲನಹಳ್ಳಿ ಗ್ರಾಮದ ಸರ್ವೆ ನಂ.53 13 ಎಕರೆ ಹಾಗೂ ಸರ್ವೆ ನಂ.54 ರಲ್ಲಿ 12 ಎಕರೆ ಹೀಗೆ ಒಟ್ಟು 25 ಎಕರೆ ಜಮೀನು ಇಲಾಖೆಯ ಹೆಸರಿಗೆ ಹಸ್ತಾಂತರವಾಗಿರುತ್ತದೆ.<br><br>ಹಾಗೂ ಚಿಕ್ಕಮಗಳೂರು ತಾಲ್ಲೂಕು ಲಕ್ಯಾ ಹೋಬಳಿಯ ಹಿರೇಗೌಜ ಗ್ರಾಮದ ಸ.ನಂ.111 15 ಎಕರೆ ಜಮೀನು ಇಲಾಖೆಯ ಹೆಸರಿಗೆ ಹಸ್ತಾಂತರವಾಗಿರುತ್ತದೆ. ಈ ಎರಡು ಸ್ಥಳಗಳಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಪಾರ್ಕ್ ಗಳನ್ನು ಸ್ಥಾಪಿಸಲು Concept Note ಅನ್ನು ಸಿದ್ಧಪಡಿಸಿ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. | ಸರ್ಕಾರದ ಅನುಮೋದನೆಯಾಗಿದ್ದು, ವ್ಯವಹಾರಿಕ ಸಲಹೆಗಾರ (Transaction Advisor) ರನ್ನು ಆಯ್ಕೆ ಮಾಡಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಜವಳಿ ಪಾರ್ಕ್ ಗಳನ್ನು ಸ್ಥಾಪಿಸಲು ಕ್ರಮವಹಿಸಲಾಗುವುದು. |
| 2. | ಕಿತ್ತೂರು ವಿಭಾಗ | 2024-25ನೇ ಸಾಲಿನ ಆಯವ್ಯಯದ ಘೋಷಣೆ ಕಂಡಿಕೆ-330 | ಕಿತ್ತೂರು ವಿಭಾಗದ ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನಲ್ಲಿ ನಾಗೂರು ಗ್ರಾಮದ ರಿ.ಸ.ನಂ.319 ರಲ್ಲಿ 15 ಎಕರೆ ಗಾಯರಾಣ ಜಮೀನನ್ನು ಗುರುತಿಸಲಾಗಿದೆ. ಕೈಮಗ್ಗ ಮತ್ತು ಜವಳಿ ಇಲಾಖೆಯ ಹೆಸರಿಗೆ ಪಡೆಯಲು ಕಂದಾಯ ಇಲಾಖೆಗೆ ಶಿಫಾರಸ್ಸು ಮಾಡಲು ಸರ್ಕಾರಕ್ಕೆ ಪತ್ರ ಬರೆಯಲಾಗಿರುತ್ತದೆ. | ಸದರಿ ಜಮೀನು ಇಲಾಖೆಯ ಹೆಸರಿಗೆ ಹಸ್ತಾಂತರವಾದ ನಂತರ ವ್ಯವಹಾರಿಕ ಸಲಹೆಗಾರ (Transaction Advisor) ಅನ್ನು ಆಯ್ಕೆ ಮಾಡಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಜವಳಿ ಪಾರ್ಕ್ ಗಳನ್ನು ಸ್ಥಾಪಿಸಲು ಕ್ರಮವಹಿಸಲಾಗುವುದು. |

****

K. Jyothi 6/3/2025

ಅನುಬಂಧ-02

## ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿ ಕಾರ್ಯನಿರ್ವಹಿಸುತ್ತಿರುವ ನೋಂದಾಯಿತ ನೇಕಾರರ ಪಟ್ಟಿ

| ಯೋಜನಾ ಕೇಂದ್ರಗಳ ಹೆಸರು | ಕ್ರಮ ಸಂಖ್ಯೆ | ಉತ್ಪಾದನಾ ಕೇಂದ್ರಗಳ ಹೆಸರು | ಕಾರ್ಯನಿರತ ಕೈಮಗ್ಗ ನೇಕಾರರ ಸಂಖ್ಯೆ |
|---|---|---|---|
| | | ಹತ್ತಿ | |
| ಬನಹಟ್ಟಿ | 1 | ಡಚ್ ಕಾಲೋನಿ ಬನಹಟ್ಟಿ | 443 |
| | 2 | ನಾವಲಗಿ | 25 |
| | 3 | ಹುನ್ನೂರು | 14 |
| | 4 | ಹುಲ್ಯಾಳ | 153 |
| | 5 | ಸಿದ್ದಾಪುರ | 51 |
| | 6 | ಜಮಖಂಡಿ | 14 |
| | 7 | ಥಾಂಬಾ | 16 |
| | 8 | ಗೋದಿಹಾಳ | 31 |
| **ಒಟ್ಟು** | | | **747** |
| ರಬಕವಿ | 1 | ರಬಕವಿ | 64 |
| | 2 | ಹೊಸೂರ | 15 |
| | 4 | ತೇರದಾಳ | 95 |
| | 5 | ಚಿಮ್ಮಡ | 58 |
| | 6 | ಕೆಂಗೇರಿ ಮಡ್ಡಿ | 98 |
| | 7 | ಮಹಾಲಿಂಗಪುರ | 78 |
| | 8 | ಬೆಳಗಲಿ | 41 |
| | 9 | ಶಿರೋಳ | 70 |
| **ಒಟ್ಟು** | | | **519** |
| ರಾಮದುರ್ಗ | 1 | ರಾಮದುರ್ಗ | 6 |
| | 2 | ಸುರೇಬಾನ | 25 |
| | 3 | ಶಿವಪೇಟ | 135 |
| | 4 | ಕಟಕೋಳ | 38 |
| | 5 | ಗೋಕಾಕ | 10 |
| | 6 | ಮೂಡಲಗಿ | 24 |
| | 7 | ಚಿಕ್ಕೋಡಿ | 30 |
| | 8 | ಬೆಳಗಾವಿ | 10 |
| | 9 | ಕಿತ್ತೂರು | 10 |
| | 10 | ಬೈಲಹೊಂಗಲ | 2 |
| | 11 | ದೇಶನೂರು | 45 |
| | 12 | ಸುಳೆಬಾವಿ | 10 |
| **ಒಟ್ಟು** | | | **345** |

| ಯೋಜನಾ ಕೇಂದ್ರಗಳ ಹೆಸರು | ಕ್ರಮ ಸಂಖ್ಯೆ | ಉತ್ಪಾದನಾ ಕೇಂದ್ರಗಳ ಹೆಸರು | ಕಾರ್ಯನಿರತ ಕೈಮಗ್ಗ ನೇಕಾರರ ಸಂಖ್ಯೆ |
|---|---|---|---|
| ಇಲಕಲ್ಲ | 1 | ಡಚ್ ಕಾಲೋನಿ ಇಳಕಲ್ | 13 |
| | 2 | ಗುಳೇದಗುಡ್ಡ | 15 |
| | 3 | ಬೇಲೂರು | 14 |
| | 4 | ಕೊಂಕಣ ಕೊಪ್ಪ | 15 |
| | 5 | ಕೆರೂರು | 8 |
| | 6 | ಹವೇಲಿ | 15 |
| | 7 | ಬಿಳಗಿ | 104 |
| | 8 | ಕಮತಗಿ | 30 |
| | 9 | ನಿಡಗುಂದಿ | 65 |
| | 10 | ವಂದಾಲ | 33 |
| | 11 | ಕೋಲ್ಹಾರ | 13 |
| | 12 | ಗೊಳಸಂಗಿ | 40 |
| | 13 | ಮುದ್ದೇಬಿಹಾಳ | 34 |
| | 14 | ನಾಲತವಾಡ | 15 |
| **ಒಟ್ಟು** | | | **414** |
| ರಾಣೇಬೆನ್ನೂರು | 1 | ರಾಣೆಬೆನ್ನೂರು–1 | 45 |
| | 2 | ರಾಣೆಬೆನ್ನೂರು–2 | 74 |
| | 3 | ತುಮ್ಮಿನಕಟ್ಟೆ | 35 |
| | 4 | ಉಜ್ಜನಿ | 19 |
| **ಒಟ್ಟು** | | | **173** |
| ಕಲಬುರ್ಗಿ | 1 | ಆಳಂದ | 35 |
| | 2 | ಮಾದನಹಿಪ್ಪರಗಾ | 59 |
| | 3 | ಹಿರೊಳ್ಳಿ | 68 |
| | 4 | ಚಿಂಚನಸೂರ | 12 |
| | 5 | ಮುಧೋಳ | 25 |
| | 6 | ಭೀಮಳ್ಳಿ | 25 |
| | 7 | ಗುರಮಿಟಕಲ್ | 63 |
| | 8 | ಚಂದರ್ಕಿ | 25 |
| | 9 | ರುಕ್ಮಾಪುರ | 59 |
| | 10 | ಕೊಡೆಕಲ್ | 5 |
| | 11 | ದೇವದುರ್ಗ | 9 |
| | 12 | ಗೋಗಿ | 42 |
| | 13 | ಶಹಾಪುರ | 40 |
| | 14 | ಲಕ್ಷ್ಮೀಪುರ | 12 |
| | 15 | ಬಸವಕಲ್ಯಾಣ | 276 |
| | 16 | ದುಬಲಗುಂಡಿ | 26 |
| | 17 | ಚಿಟಗುಪ್ಪ | 6 |
| **ಒಟ್ಟು** | | | **787** |

| ಯೋಜನಾ ಕೇಂದ್ರಗಳ ಹೆಸರು | ಕ್ರಮ ಸಂಖ್ಯೆ | ಉತ್ಪಾದನಾ ಕೇಂದ್ರಗಳ ಹೆಸರು | ಕಾರ್ಯನಿರತ ಕೈಮಗ್ಗ ನೇಕಾರರ ಸಂಖ್ಯೆ |
|---|---|---|---|
| ಗದಗ–ಬೆಟಗೇರಿ | 1 | ನರಸಾಪುರ | 196 |
| | 2 | ಶಿಗ್ಲಿ | 6 |
| | 3 | ಗಜೇಂದ್ರಗಡ | 17 |
| | 4 | ಮುಶಿಗೇರಿ | 18 |
| | 5 | ಹುಬ್ಬಳ್ಳಿ | 19 |
| | 6 | ಹೆಬ್ಬಳ್ಳಿ | 8 |
| | 7 | ಉಪ್ಪಿನ ಬೆಟಗೇರಿ | 10 |
| | 8 | ಕಿನ್ನಾಳ | 58 |
| | 9 | ಗಿಣಿಗೇರಾ | 12 |
| | 10 | ಭಾಗ್ಯನಗರ | 10 |
| | 11 | ಮಂಗಳೂರ | 4 |
| ಒಟ್ಟು | | | **358** |
| **ಒಟ್ಟು ಹತ್ತಿ ಕೈಮಗ್ಗ ನೇಕಾರ ಫಲಾನುಭವಿಗಳು** | | | **3343** |
| | | ರೇಷ್ಮೆ | |
| | 1 | ಆನೇಕಲ್ | 20 |
| | 2 | ಎಸ್.ಆರ್.ನಗರ | 12 |
| | 3 | ತ್ಯಾಮಗೊಂಡ್ಲು | 24 |
| | 4 | ಚಿಂತಾಮಣಿ | 17 |
| | 5 | ತಿಪಟೂರು | 15 |
| | 6 | ಕಲ್ಲೂರು | 22 |
| | 7 | ಕೊಳ್ಳೇಗಾಲ | 30 |
| | 8 | ಕಿಕ್ಕೇರಿ | 8 |
| | 9 | ಮೇಲುಕೋಟೆ | 12 |
| | 10 | ಮೊಳಕಾಲ್ಮೂರು | 30 |
| | 11 | ಕೊಂಡ್ಲಹಳ್ಳಿ | 9 |
| | 12 | ವೈ.ಎನ್.ಹೊಸಕೋಟೆ | 25 |
| **ಒಟ್ಟು ರೇಷ್ಮೆ ಕೈಮಗ್ಗ ನೇಕಾರ ಫಲಾನುಭವಿಗಳು** | | | **224** |
| **ಒಟ್ಟು ಹತ್ತಿ ಮತ್ತು ರೇಷ್ಮೆ ಕೈಮಗ್ಗ ನೇಕಾರ ಫಲಾನುಭವಿಗಳು** | | | **3567** |

K. Jyothi 6/3/2025

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು, ಕೈಮಗ್ಗ ಮತ್ತು ಜವಳಿ,